# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-10

Cw-07

| | |
|---|---|
| ಸಾಕ್ಷಿದಾರರ ಹೆಸರುಃ | ಕೃಷ್ಣಯ್ಯ ವಾಲಿಕಾರ |
| ತಂದೆಃಗಂಡನ ಹೆಸರುಃ | ಗೋವಿಂದಪ್ಪ |
| ವಯಸ್ಸುಃ | 29 ವರ್ಷ |
| ಉದ್ಯೋಗಃ | ಗ್ರಾಮಲೆಕ್ಕಾಧಿಕಾರಿ |
| ವಾಸ ಸ್ಥಳಃ | ನಾಗನೂರು ತಾಃ ಹಾವೇರಿ |

**ದಿನಾಂಕ:25.09.2024 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

2016 ರಿಂದ ನಾಗನೂರು ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕಃ18.03.2021 ರಂದು ತಹಶೀಲ್ದಾರವರ ಆದೇಶದ ಮೇರೆಗೆ ನಾನು ಮತ್ತು ಚಾಸಾ-6 ರವರು ಪೊಲೀಸ್ ಠಾಣೆಗೆ ಹೋದೆವು. ಠಾಣೆಯಲ್ಲಿ ಆರೋಪಿಗಳು ಇದ್ದರು. ಈ ಕೇಸಿನಲ್ಲಿ ಕೊಲೆಯಾಗಿದೆ ಅಂತಾ ಯತ್ತಿನಹಳ್ಳಿ ಗ್ರಾಮದ ಮಳೀಮಠ ಕಾಂಪ್ಲೆಕ್ಸ ಹತ್ತಿರ ಕರೆದುಕೊಂಡು ಹೋಗಿ ಮಹಜರು ಮಾಡಿ, ನಕಾಶೆ ತೆಗೆದು, ಪೋಟೋ ತೆಗೆದರು. ಮಹಜರನ್ನು ನಿಪಿ-22, ಸಾಕ್ಷಿ ಸಹಿ ನಿಪಿ-22(ಬಿ), ಪೋಟೋ ನಿಪಿ-23, 24, ನಕಾಶೆ ನಿಪಿ-25, ಸಾಕ್ಷಿ ಸಹಿ ನಿಪಿ-25(ಬಿ) ಅಂತಾ ಗುರುತಿಸಲಾಯಿತು.

ನಂತರ ಗಿರಿಶಿನಕೊಪ್ಪ ಹಾನಗಲ್ ರಸ್ತೆಯ ಹತ್ತಿರ ಕರೆದುಕೊಂಡು ಹೋಗಿ ಜಪ್ತು ಪಂಚನಾಮೆ ಮಾಡಿ ಪೋಟೋ ತೆಗೆದು, ಸ್ಕೆಚ್ ತಯಾರಿಸಿದರು. ಸದರಿ ಪಂಚನಾಮೆ ನಿಪಿ-26, ಸಾಕ್ಷಿ ಸಹಿ ನಿಪಿ-26(ಬಿ), ಪೋಟೋ ನಿಪಿ-27 ರಿಂದ 30, ನಕಾಶೆ ನಿಪಿ-31, ಸಾಕ್ಷಿ ಸಹಿ

ನಿಪಿ-31(ಬಿ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ಮು.ಮಾ-8, 9 ನ್ನು ಜಪ್ತು ಮಾಡಿರುತ್ತಾರೆ.

ಅದೇ ದಿನ ಹಾನಗಲ್ ರಸ್ತೆಯ ಸ್ಮಶಾನದ ಹತ್ತಿರ ಕರೆದುಕೊಂಡು ಹೋಗಿ ಲಾರಿ ಜಪ್ತು ಪಂಚನಾಮೆ ಮಾಡಿ, ಫೋಟೋ ತೆಗೆದು, ಸ್ಕೆಚ್ ತಯಾರಿಸಿದರು. ಲಾರಿ ನಂ.ಕೆಎ-27/ಬಿ-6041 ಲಾರಿಯನ್ನು ಜಪ್ತು ಮಾಡಿದರು. ಪಂಚನಾಮೆ ನಿಪಿ-32, ಸಾಕ್ಷಿ ಸಹಿ ನಿಪಿ-32(ಬಿ), ಫೋಟೋ ನಿಪಿ-33 ರಿಂದ 36, ನಕಾಶೆ ನಿಪಿ-37, ಸಾಕ್ಷಿ ಸಹಿ ನಿಪಿ-37(ಬಿ) ಅಂತಾ ಗುರುತಿಸಲಾಯಿತು.

ಅದೇ ದಿನ ಗೆಜ್ಜಹಳ್ಳಿ ಧರ್ಮ ಕಾಲುವೆ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಬಟ್ಟೆ ಜಪ್ತು ಪಂಚನಾಮೆ ಮಾಡಿ, ಫೋಟೋ ತೆಗೆದು, ಸ್ಕೆಚ್ ತಯಾರಿಸಿದರು. ಪಂಚನಾಮೆ ನಿಪಿ-38, ಸಾಕ್ಷಿ ಸಹಿ ನಿಪಿ-38(ಬಿ), ಫೋಟೋ ನಿಪಿ-39 ರಿಂದ 42, ನಕಾಶೆ ನಿಪಿ-43, ಸಾಕ್ಷಿ ಸಹಿ ನಿಪಿ-43(ಬಿ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ರಕ್ತ ಹತ್ತಿದ ಗುಲಾಬಿ ಬಣ್ಣದ ಅಂಗಿ, ನಿಕ್ಕರ್ ನ್ನು ಅಮಾನತ್ತುಪಡಿಸಿಕೊಂಡರು. ಅವುಗಳನ್ನು ಕ್ರಮವಾಗಿ ಮುಮಾ-10, 11 ಅಂತಾ ಗುರುತಿಸಲಾಯಿತು.

ಅದೇ ದಿನ ಬಟ್ಟೆ ಸುಟ್ಟ ಜಾಗ ಅಂದರೆ ಉದಾಸಿ ಲೇಔಟ್ ಗೆ ಕರೆದುಕೊಂಡು ಹೋಗಿ ಅಲ್ಲಿ ಪಂಚನಾಮೆ ಮಾಡಿ, ಫೋಟೋ ತೆಗೆದು, ಸ್ಕೆಚ್ ತಯಾರಿಸಿದರು. ಪಂಚನಾಮೆ ನಿಪಿ-44, ಸಾಕ್ಷಿ ಸಹಿ ನಿಪಿ-44(ಬಿ), ಫೋಟೋ ನಿಪಿ-45 ರಿಂದ 48, ನಕಾಶೆ ನಿಪಿ-49, ಸಾಕ್ಷಿ ಸಹಿ ನಿಪಿ-49(ಬಿ) ಅಂತಾ ಗುರುತಿಸಲಾಯಿತು. ಸ್ಥಳದಲ್ಲಿ ಸುಟ್ಟು ಕರಕಲಾದ ಬಟ್ಟೆ ಮತ್ತು ಬೆಲ್ಟನ್ನು ಅಮಾನತ್ತುಪಡಿಸಿಕೊಂಡರು. ಅವುಗಳನ್ನು ಕ್ರಮವಾಗಿ ಮುಮಾ-12, 13 ಅಂತಾ ಗುರುತಿಸಲಾಯಿತು. ತಹಶೀಲ್ದಾರರ ಆದೇಶ ಪ್ರತಿಯನ್ನು ನಿಪಿ-50 ಅಂತಾ ಈಗಾಗಲೇ ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

ನಾನು ಹೊಂಬರಡಿಯಲ್ಲಿ ವಾಸ ಇರುತ್ತೇನೆ. ತಹಶೀಲ್ದಾರರು ಆದೇಶದ ಮಾಡಿದ ದಿನದಂದೇ ನನಗೆ ಹೇಳಿದ್ದಾರೆ. ಪೊಲೀಸರು ನಮ್ಮನ್ನು ಕರೆಯಲು ಬಂದಿಲ್ಲ. ಪೊಲೀಸರು ನೋಟೀಸು ಕೊಟ್ಟು ಮಹಜರಿಗೆ ಕರೆದಿಲ್ಲ. ಹಾವೇರಿ ಶಹರ ಪೊಲೀಸ್ ಠಾಣೆ ಮತ್ತು ಡಿವೈಎಸ್‌ಪಿ ಕಚೇರಿ ಬೇರೆ-ಬೇರ ಕಡೆ ಇದೆ. ಆರೋಪಿತರು ಯಾರೆಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಅವರನ್ನು ಎಲ್ಲಿಂದ, ಯಾರು ಕರೆದುಕೊಂಡು ಬಂದಿದ್ದಾರೆ ಮಾಹಿತಿ ಇಲ್ಲ. ಆರೋಪಿಗಳನ್ನು ನಾನು ವಿಚಾರಿಸಿಲ್ಲ.

ನಾವು ಪೊಲೀಸ್ ವಾಹನದಲ್ಲಿ ಹೋದೆವು. ಅದರ ನಂಬರ್ ಹೇಳಲಾಗುವುದಿಲ್ಲ. ಯಾವ-ಯಾವ ಜೀಪಿನಲ್ಲಿ ಯಾರು-ಯಾರು ಇದ್ದರು ಹೇಳಲಾಗುವುದಿಲ್ಲ. ನಿಪಿ-22 ನ್ನು ನಾನು ಹೇಳಿ ಬರೆಸಿಲ್ಲ. ಅಲ್ಲಿ ಎಷ್ಟು ಮಳಿಗೆಗಳು ಇದ್ದವು ನೆನಪಿಲ್ಲ. ನಿಪಿ-23, 24 ರಲ್ಲಿ ದಿನಾಂಕ, ಸಮಯ ಇಲ್ಲ. ಪೋಟೋದಲ್ಲಿ ಜೀಪ್ ಕಾಣಿಸುವುದಿಲ್ಲ. ಮಳಿಗೆಗಳನ್ನು ನಾನು ಅಳತೆ ಮಾಡಿಲ್ಲ. ಕಾಂಪ್ಲೆಕ್ಸ ಯಾರ ಹೆಸರಿನಲ್ಲಿದೆ ಎಂದು ದಾಖಲೆ ನೋಡಿಲ್ಲ. ಅಲ್ಲಿ ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ. ಮಹಜರಿನಲ್ಲಿರುವ ಸ್ಥಳದ ಚಕ್ಕುಬಂಧಿ ಹೇಳಲಾಗುವುದಿಲ್ಲ. ನಿಪಿ-22 ಕ್ಕೆ ಎಷ್ಟು ಜನ ಸಹಿ ಮಾಡಿದ್ದಾರೆ ಗೊತ್ತಿಲ್ಲ. ಪಂಚನಾಮೆ ಸ್ಥಳ ಮೊದಲೇ ಪೊಲೀಸರಿಗೆ ಗೊತ್ತಿತ್ತು. ನಿಪಿ-22 ನ್ನು ಯಾರು ಬರೆದರು ಅಂತಾ ವೈಯಕ್ತಿಕವಾಗಿ ಹೇಳಲಾಗುವುದಿಲ್ಲ. ನಿಪಿ-25 ರ ಬಗ್ಗೆ ಮಾಹಿತಿ ಇಲ್ಲ.

ನಿಪಿ-27, 28 ರಲ್ಲಿ ಕಾಣಿಸುವ ಜಾಗದಲ್ಲಿ ಜನರು ಓಡಾಡುತ್ತಾರೆ ಎಂದರೆ ಸರಿ. ನಿಪಿ-27 ರಿಂದ 30 ಪೋಟೋಗಳಲ್ಲಿ ದಿನಾಂಕ, ಸಮಯ ಇಲ್ಲ. ನಿಪಿ-26 ರಲ್ಲಿ ತೋರಿಸಿದ ಚಕ್ಕುಬಂಧಿ ಹೇಳಲಾಗುವುದಿಲ್ಲ. ಮು.ಮಾ-8 ರಂತಹ ರಾಡು ಬೇರೆ ಕಡೆ ಸಿಗುತ್ತವೆ ಎಂದರೆ ಸರಿ. ಅದರಲ್ಲಿ ರಕ್ತದ ಕಲೆ ಕಾಣುತ್ತಿಲ್ಲ. ನಿಪಿ-26 ನ್ನು ನಾನು ಹೇಳಿ ಬರೆಸಿಲ್ಲ. ನಿಪಿ-29, 30 ರಲ್ಲಿ ಆರೋಪಿತರ

ಕೈಯಲ್ಲಿ ರಾಡು ಇಲ್ಲ. ಅದು ಯಾರ ಜಮೀನು ಅಂತಾ ಮಾಹಿತಿ ಇಲ್ಲ. ನಿಪಿ-27 ರಿಂದ 30 ರಲ್ಲಿ ಪಂಚನಾಮೆ ಬರೆಯುವುದು ಕಾಣುವುದಿಲ್ಲ ಎಂದರೆ ಸರಿ.

ಮುದ್ದೆ ಮಾಲುಗಳ ಮೇಲೆ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ. ಪೊಲೀಸರು ನನ್ನ ಸಮಕ್ಷಮ ಮುದ್ದೆ ಮಾಲುಗಳನ್ನು ಬಿಳಿ ಬಟ್ಟೆಯಿಂದ ಸೀಲು ಮಾಡಿ ಜಪ್ತು ಮಾಡಿಲ್ಲ. ಈ ಬಗ್ಗೆ ಪೋಟೋಗಳು ಇಲ್ಲ. ಕಾಲುವೆ ಏನೇ ಹಾಕಿದರೂ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುತ್ತದೆ ಎಂದರೆ ಸರಿ. ನಿಪಿ-26 ನ್ನು ಮಾಡಿದ ಸ್ಥಳಕ್ಕೆ ಪೊಲೀಸರೇ ವಾಹನ ನಿಲ್ಲಿಸಿ ಕರೆದುಕೊಂಡು ಹೋದರು. ಕಾಲುವೆ ಇದ್ದ ಬಗ್ಗೆ ಪೋಟೋದಲ್ಲಿ ಕಾಣುತ್ತಿಲ್ಲ. ಅಲ್ಲಿ ಜನರು ಓಡಾಡುತ್ತಾರೆ. ನಿಪಿ-31 ನಕಾಶೆಯನ್ನು ಯಾಕೆ ತೆಗೆದರು ಅಂತಾ ಮಾಹಿತಿ ಇಲ್ಲ.

ಏನಾದರೂ ತಪ್ಪು ಆಗಿದ್ದರೆ ತಪ್ಪು ಮಾಡಿದ ಸ್ಥಳದಲ್ಲಿ ಸಣ್ಣ ರುಜು ಮಾಡುತ್ತಾರೆ ಎಂದರೆ ಸರಿ. ಲಾರಿ ಯಾವ ಕಂಪನಿಯದು ಅಂತಾ ಹೇಳಲಾಗುವುದಿಲ್ಲ. ನಿಪಿ-32 ರಲ್ಲಿ ಬರೆದ ಚಕ್ಕುಬಂಧಿ ಹೇಳಲಾಗುವುದಿಲ್ಲ. ನಿಪಿ-33 ರಿಂದ 36 ಪೋಟೋದಲ್ಲಿ ದಿನಾಂಕ, ಸಮಯ ಇಲ್ಲ. ಅದು ಜನದಟ್ಟಣೆ ಇರುವ ಜಾಗ ಎಂದರೆ ಸರಿ. ಲಾರಿ ಯಾರ ಹೆಸರಿನಲ್ಲಿತ್ತು ಅಂತಾ ವಿಚಾರಣೆ ಮಾಡಿಲ್ಲ. ನಿಪಿ-37 ನಕಾಶೆಯನ್ನು ಯಾಕೆ ತೆಗೆದರು ಅಂತಾ ಮಾಹಿತಿ ಇಲ್ಲ. ಎಷ್ಟು ಗಂಟೆಗೆ ಶುರು ಮಾಡಿ ಎಷ್ಟು ಗಂಟೆಗೆ ಮಹಜರು ಮಾಡಿ ಮುಗಿಸಿದರು ಹೇಳಲಾಗುವುದಿಲ್ಲ.

ಹಾನಗಲ್ ರಸ್ತೆಯಲ್ಲಿ ಬಹಳ ವಾಹನಗಳು ಓಡಾಡುತ್ತವೆ ಎಂದರೆ ಸರಿ. ನಿಪಿ-38 ನ್ನು ನಾನು ಹೇಳಿ ಬರೆಸಿಲ್ಲ. ನಿಪಿ-39 ರಿಂದ 42 ಪೋಟೋದಲ್ಲಿರುವ ಸ್ಥಳವು ಸಾರ್ವಜನಿಕ ರಸ್ತೆ ಎಂದರೆ ಸರಿ. ಜೀಪನ್ನು ನಿಲ್ಲಿಸಿ ಪೊಲೀಸರು ಕರೆದುಕೊಂಡು ಹೋದರು. ನೀರಿನ ಆಳ ಎಷ್ಟು ಇತ್ತು ಅಂತಾ ಪೋಟೋದಲ್ಲಿ ಕಾಣುವುದಿಲ್ಲ. ನಿಪಿ-41, 42 ರಲ್ಲಿ ಡಿವೈಎಸ್‌ಪಿಯವರ ಪೋಟೋ ಇದೆ. ಮುದ್ದೆ ಮಾಲುಗಳನ್ನು ನನ್ನ ಸಮಕ್ಷಮ ಬಿಳಿ ಬಟ್ಟೆ ಹಾಕಿ ಜಪ್ತು ಮಾಡಿಲ್ಲ. ಮಹಜರಿನಲ್ಲಿ ತೋರಿಸಿದ ಸ್ಥಳದ ಚಕ್ಕುಬಂಧಿ ಹೇಳಲಾಗುವುದಿಲ್ಲ. ಸ್ವಲ್ಪ ಸಹಿಗಳನ್ನು ಸ್ಥಳದಲ್ಲಿ,

ಸ್ವಲ್ಪ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದೇನೆ. ಕಾಲುವೆಯನ್ನು ಬಹಳಷ್ಟು ಜನ ಉಪಯೋಗಿಸುತ್ತಾರೆ.

ಹಾನಗಲ್ ಬಿಟ್ಟಾಗ ಎಷ್ಟು ಗಂಟೆಯಾಗಿತ್ತು ಹೇಳಲಾಗುವುದಿಲ್ಲ. ನಿಪಿ-44 ನ್ನು ನಾನು ಹೇಳಿ ಬರೆಸಿಲ್ಲ. ನಿಪಿ-44 ರ ಚಕ್ಕುಬಂಧಿ ಹೇಳಲಾಗುವುದಿಲ್ಲ. ನಿಪಿ-45 ರಿಂದ 48 ರಲ್ಲಿ ಕಾಣಿಸುವುದು ಖುಲ್ಲಾ ಜಾಗ ಎಂದರೆ ಸರಿ. ಅಲ್ಲಿ ಬಹಳಷ್ಟು ಜನ ವಾಕಿಂಗ್ ಮಾಡುತ್ತಾರೆ ಎಂದರೆ ಸರಿ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಪ್ಲಾಸ್ಟಿಕ್ ಚೀಲದಲ್ಲಿ ಜಪ್ತು ಮಾಡಿಲ್ಲ. ಬೂದಿ, ಸುಟ್ಟ ಕಟ್ಟಿಗೆ ಜಪ್ತು ಮಾಡಿಲ್ಲ. ನಿಪಿ-45 ರಿಂದ 48 ಫೋಟೋದಲ್ಲಿ ಕಾಣಿಸುವ ಸ್ಥಳಕ್ಕೆ ಪೊಲೀಸರು ಜೀಪು ನಿಲ್ಲಿಸಿ ಕರೆದುಕೊಂಡು ಹೋಗಿರುತ್ತಾರೆ. ನಿಪಿ-49 ನ್ನು ಯಾಕೆ ತೆಗೆದಿದ್ದಾರೆ ಗೊತ್ತಿಲ್ಲ. ನಿಪಿ-50 ನ್ನು ನನಗೆ ಕೊಟ್ಟಿಲ್ಲ. ಏನು ಸೀಲು ಮಾಡಿದರು, ಏನು ಹೆಸರಿತ್ತು ಗೊತ್ತಿಲ್ಲ.

ಡಿವೈಎಸ್‌ಪಿ ಹೇಳಿದ ಪ್ರಕಾರ ನಾನು ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ವಸ್ತುಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳಿದರೆ ತೊಂದರೆಯಾಗುತ್ತದೆ ಅಂತಾ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳಿದ್ದೇನೆಂದರೆ ಸರಿಯಲ್ಲ. ಎಷ್ಟು ಸಹಿ ಮಾಡಿದ್ದೇನೆ ಮಾಹಿತಿ ಇಲ್ಲ. ಆ ದಾಖಲೆಗಳಲ್ಲಿ ಏನು ಬರೆದಿದೆ ಮಾಹಿತಿ ಇಲ್ಲ. ಆರೋಪಿಗಳಿಗೂ ಮುದ್ದೆ ಮಾಲುಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.